ಕೆ.ಪಿ.ಎಲ್.ಗೆ ಭೂಮಿ ನೀಡಿಕೆಗೆ ವಿರೋಧ

3625 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್‌ಗೆ (ಕೆಪಿಎಲ್) ರಾಜ್ಯದ 75 ಸಾವಿರ ಎಕರೆ ಭೂಮಿಯನ್ನು ಕೊಟ್ಟಿರುವುದನ್ನು ವಿರೋಧಿಸಿ ರಾಜ್ಯದ ಜನತೆ ಹಾಗೂ 72 ಜನ ಶಾಸಕರು ಸರ್ಕಾರಕ್ಕೆ ಮನವಿ ಕೊಟ್ಟಿರುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಕೆ.ಪಿ.ಎಲ್‌ನ್ನು ರದ್ದುಪಡಿಸಿ ಅದಕ್ಕೆ ಕೊಟ್ಟಿರುವ 75 ಸಾವಿರ ಎಕರೆ ರಾಜ್ಯ ಭೂಮಿಯನ್ನು ಪರಿಶಿಷ್ಟ ಜಾತಿ ಜನಾಂಗದವರಿಗೆ ಹಾಗೂ ಬಡ ರೈತರಿಗೆ ಸಾಮಾಜಿಕ ಅರಣ್ಯ ಅಭಿವೃದ್ಧಿ ಪಡಿಸಲು ವಿತರಣೆ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಇ) ಈ ಬಗ್ಗೆ ಸರ್ಕಾರದ ಕ್ರಮ ಹಾಗೂ ನೀತಿಯೇನು?

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ಗಮನಿಸಿದೆ.

ಆ) ಕೆ.ಪಿ.ಎಲ್‌ನ್ನು ರದ್ದುಪಡಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಕೆ.ಪಿ.ಎಲ್. ರದ್ದುಪಡಿಸುವ ನಿರ್ಧಾರ ಆಧರಿಸಿ ಸರ್ಕಾರ ಮುಂದಿನ ಕ್ರಮದ ಬಗ್ಗೆ ಪರಿಗಣಿಸಬೇಕಾಗಿರುತ್ತದೆ.

ಕೊಂಕಣ ರೈಲ್ವೆ ಯೋಜನೆ ಭೂಸ್ವಾಧೀನಕ್ಕೆ ಪರಿಹಾರ

2482 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ರೈತರು ಸಾಗುವಳಿ ಮಾಡುತ್ತಿರುವ ಭೂಮಿ, ಗದ್ದೆ, ತೋಟಗಳನ್ನು ಕೊಂಕಣ ರೈಲ್ವೆ ಯೋಜನೆಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಭೂಸ್ವಾಧೀನ ಪಡಿಸಿಕೊಂಡ ರೈತರುಗಳ ಸಾಗುವಳಿ ಭೂಮಿ ಗದ್ದೆ, ತೋಟಗಳಿಗೆ ಇದುವರೆಗೂ ಪರಿಹಾರದ ಹಣವನ್ನು ನೀಡುವಲ್ಲಿ ವಿಳಂಬವಾಗುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ ಇದುವರೆಗೂ ಎಷ್ಟು ಜನ ರೈತರುಗಳಿಗೆ ಪರಿಹಾರ ಧನವನ್ನು ನೀಡಲಾಗಿದೆ. ಮತ್ತು ಈ ಪ್ರತಿಯೊಬ್ಬ ರೈತರಿಗೂ ನೀಡಿರುವ ಪರಿಹಾರಧನದ ಮೊತ್ತವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 1133 ಎಕರೆ (ಕಾರವಾರ 248 ಎಕರೆ, ಕುಮಟ 215 ಎಕರೆ, ಅನ್‌ಕೋಲಾ 211 ಎಕರೆ, ಹೊನ್ನಾವರ 244 ಎಕರೆ, ಭಟ್ಕಳ್ 215 ಎಕರೆ)

ಆ) ಹೌದು.

ಇ) 23 ಜನರಿಗೆ ರೂ. 6,62,100.00 ಗಳ ಪರಿಹಾರ ಧನವನ್ನು ನೀಡಲಾಗಿದೆ.

.ಹೊಸ ತಾಲ್ಲೂಕು ಜಿಲ್ಲೆಗಳ ರಚನೆ

2537 - ಶ್ರೀ ಜಿ.ಎಸ್. ಆಚಾರ್, (ಬೈಂದೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?